


# ವಿದ್ಯಾರ್ಥಿ-ಯುವಜನ
# ಪ್ರಣಾಳಿಕೆ

ಲೋಕಸಭಾ ಚುನಾವಣೆ 2024

# STUDENT-YOUTH
# MANIFESTO

LOK SABHA ELECTIONS 2024

ವಿದ್ಯಾರ್ಥಿ ಸಂಘಟನೆಗಳ ಒಕ್ಕೂಟ, ಕರ್ನಾಟಕ

# ವಿದ್ಯಾರ್ಥಿ-ಯುವಜನ ಪ್ರಣಾಳಿಕೆ

## ಲೋಕಸಭಾ ಚುನಾವಣೆ 2024

ಕಲ್ಯಾಣ ರಾಜ್ಯಕ್ಕಾಗಿ ಯುವಜನರು

2024ರ ಈ ಬಾರಿಯ ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ವಿದ್ಯಾರ್ಥಿ–ಯುವಜನರ ಬೇಡಿಕೆಯ ವಿಚಾರಗಳನ್ನು ಸೇರಿಸಲು ಮತ್ತು ಈ ಹಕ್ಕೊತ್ತಾಯಗಳೇ ಯುವಜನರ ಮತಗಳನ್ನು ನಿರ್ಣಯಿಸುವಂತೆ ಜನಾಭಿಪ್ರಾಯ ಮೂಡಿಸಲು ಕರ್ನಾಟಕದ ವಿದ್ಯಾರ್ಥಿ ಸಂಘಟನೆಗಳ ಒಕ್ಕೂಟವು ಶಿಕ್ಷಣದ ಮೂಲಭಾಗಿದಾರರೊಂದಿಗೆ ಸಮಾಲೋಚಿಸಿ "ವಿದ್ಯಾರ್ಥಿ–ಯುವಜನ ಪ್ರಣಾಳಿಕೆ"ಯನ್ನು ತಯಾರುಗೊಳಿಸಿದೆ, ಎಲ್ಲಾ ರಾಜಕೀಯ ಪಕ್ಷಗಳು ಈ ಬೇಡಿಕೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮತ್ತು ಬದ್ಧತೆಯನ್ನು ಖಚಿತಪಡಿಸಬೇಕೆಂದು ಆಗ್ರಹಿಸುತ್ತದೆ.

Dalit Vidyarthi Parishad**(DVP)**
Karnataka Vidhyarthi Sanghatane**(KVS)**
Students Islamic Organisation Of India, Karnataka**(SIO)**
All India Students Association **(AISA)**
Ambedkar Students Association **(ASA-agri)**
Students Federation for Peoples' Democracy **(SFPD)**
Bengaluru Snatakkottara mattu Samshodhana vidyarthigala Okkuta- **BENGALURU UNIVERSITY**
Students Christian Movement of India **(SCMI)**
All India forum for right to education **(AIFRTE)**

## ಉಚಿತ ಶಿಕ್ಷಣ ನೀಡುವ ಸಂವಿಧಾನ v/s ವ್ಯಾಪಾರಕ್ಕಿಳಿದಿರುವ ಸರ್ಕಾರ

ಭಾರತದ ಸಂವಿಧಾನವು ಕಾಲಮಿತಿಯನ್ನು ಸೂಚಿಸಿರುವುದು ಶಿಕ್ಷಣಕ್ಕೆ ಮಾತ್ರ! ಆರ್ಟಿಕಲ್ 45 ರಲ್ಲಿ "ಸಂವಿಧಾನ ಜಾರಿಯಾದ ಮುಂದಿನ 10 ವರ್ಷದೊಳಗಾಗಿ ದೇಶದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುವ ಪ್ರಯತ್ನ ಮಾಡಬೇಕು" ಎಂದು ಹೇಳುತ್ತದೆ. ಆದರೆ ಸಂವಿಧಾನವನ್ನು ಒಪ್ಪಿಕೊಂಡು ಅಧಿಕಾರಕ್ಕೆ ಬರುವ ಸರ್ಕಾರವು ಇಲ್ಲಿಯವರೆಗೆ ಮಾಡಿದ್ದೇನು? ಫೀಸು, ಡೋನೇಷನ್ ಹೆಸರಲ್ಲಿ ಮಕ್ಕಳನ್ನು ಸುಲಿಯುವುದು ಮತ್ತು ಪೋಷಕರನ್ನು ಸಾಲಗಾರರನ್ನಾಗಿ ಮಾಡುವುದು. ದುಡ್ಡಿದ್ದ ಮಕ್ಕಳಿಗೆ ಒಂದು ರೀತಿಯ ಶಿಕ್ಷಣ ಮತ್ತು ಬಡವರಿಗೆ ಬೇರೆ ರೀತಿಯ ಶಿಕ್ಷಣವನ್ನು ಒದಗಿಸುತ್ತಿದೆ. ಸರ್ಕಾರವೇ ಮುಂದೆ ನಿಂತು ಮಕ್ಕಳನ್ನು ದುಡ್ಡಿನ ಆಧಾರದ ಮೇಲೆ ಅಸಮಾನತೆಯ ಬುನಾದಿಯನ್ನು ರಚಿಸಿ ಬೇರ್ಪಡಿಸುತ್ತಿದೆ. ಇದು ದೇಶದ ಸಂವಿಧಾನ ಮತ್ತು ಏಕತೆಗೆ ಮಾಡುತ್ತಿರುವ ಘನಘೋರ ಅನ್ಯಾಯ. ಇದರ ಪರಿಣಾಮವಾಗಿ, ಮಕ್ಕಳು ಕೋಟ್ಯಾಂತರ ರೂಪಾಯಿಯನ್ನು ಶಿಕ್ಷಣಕ್ಕಾಗಿ ಖರ್ಚು ಮಾಡಬೇಕಿದೆ. ಮತ್ತು, ಮುಂದೊಂದು ದಿನ ಆ ದುಡ್ಡು ಹಿಂಪಡೆಯಲು ಮಾತ್ರವೇ ಉದ್ಯೋಗ ಮಾಡಬೇಕಾದ ಅನಿವಾರ್ಯ ಪರಿಸ್ಥಿತಿಗೆ ವಿದ್ಯಾರ್ಥಿಗಳನ್ನು ತಳ್ಳುವ ಮೂಲಕ, ಭ್ರಷ್ಟಾಚಾರಕ್ಕೂ ಸರ್ಕಾರವೇ ವೇದಿಕೆ ಸೃಷ್ಟಿ ಮಾಡಿದ್ದಂತಾಗಿದೆ.

## ಸಾಲ ಸೋಲ ಮಾಡಿ, ಹಣದ ಚಕ್ರವ್ಯೂಹವನ್ನು ಭೇದಿಸಿ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ಸಿಗುವುದೇನು?

ದೇಶದ ಪ್ರತಿಷ್ಠಿತ ಸಂಸ್ಥೆ NSSO ವರದಿಯ ಪ್ರಕಾರ, 45–ವರ್ಷದಗಳ ಇತಿಹಾಸದಲ್ಲೇ ಕಂಡಿರದಿದ್ದ ಮಟ್ಟಕ್ಕೆ ನಿರುದ್ಯೋಗ ಏರಿಕೆಯಾಗಿದೆ. ಅಲ್ಲದೇ, ಕೇವಲ 62 ಹುದ್ದೆಗೆ 10 ಸಾವಿರ ದಷ್ಟು ಅರ್ಜಿಗಳು ಬಂದಿವೆ.  60 ಸಾವಿರ ಪೋಲಿಸ್ ಹುದ್ದೆಗೆ ಉತ್ತರ ಪ್ರದೇಶದಲ್ಲಿ ಬರೋಬ್ಬರಿ 50 ಲಕ್ಷ ಯುವಜನರು ಅರ್ಜಿಯನ್ನು ಹಾಕಿದ್ದರು.  ಅಂದರೆ, ನಿರುದ್ಯೋಗದ ಭೀಕರತೆಯನ್ನು ಅರ್ಥ ಮಾಡಿಕೊಳ್ಳಬಹುದು. ಸರ್ಕಾರ ಇಂದು ಕೇವಲ ಶೇ.2% ಕಿಂತಲೂ ಕಮ್ಮಿ ಉದ್ಯೋಗದಾತ ಕ್ಷೇತ್ರವನ್ನು ಉಳಿಸಿಕೊಂಡಿದೆ. ಉದ್ಯೋಗ ಸೃಷ್ಟಿ ಮಾಡುವ ಬದಲು ನಿರುದ್ಯೋಗವೇ ಇಲ್ಲ ಎನ್ನುವ ಸುಳ್ಳು ಹೇಳುವ ಕೀಳು ಮಟ್ಟಕ್ಕೆ ಸರ್ಕಾರ ಇಳಿದಾಗಿದೆ!

## ಭದ್ರತೆಯಿಲ್ಲದ ಉದ್ಯೋಗ-ಭವಿಷ್ಯವಿಲ್ಲದ ದೇಶ!

ಶೇ. 96% ಕ್ಕೂ ಹೆಚ್ಚು ಉದ್ಯೋಗ ಲಭ್ಯವಿರುವುದು ಖಾಸಗೀ ಕ್ಷೇತ್ರದಲ್ಲಿ. ಇಲ್ಲಿ ಯಾವುದೇ ಉದ್ಯೋಗ ಭದ್ರತೆಯಿರುವುದಿಲ್ಲ. ಅಲ್ಲದೇ, ಸರ್ಕಾರವೇ ತನ್ನ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ಯಾವುದೇ ಭದ್ರತೆಯನ್ನು ನೀಡದೇ ಜೀತ ಮಾಡಿಸಿಕೊಳ್ಳುತ್ತಿದೆ. ಅಷ್ಟೇ ಅಲ್ಲ, ಪ್ರಪಂಚದ ಯಾವ ದೇಶದಲ್ಲೂ ಇಲ್ಲದ ವಿಚಿತ್ರವಾದ ಪದ್ಧತಿಯೊಂದನ್ನು ಪರಿಚಯಿಸುವ ಮೂಲಕ, ಅತ್ಯಂತ ಸೂಕ್ಷ್ಮವಾದ ಸೈನ್ಯದಲ್ಲೂ ಗುತ್ತಿಗೆ ಪದ್ಧತಿಯಲ್ಲಿ ನೇಮಕ ಮಾಡಿಕೊಂಡು 4 ತಿಂಗಳ ನಂತರ ಯುವ ಸೈನಿಕರನ್ನು ಬೀದಿಪಾಲು ಮಾಡುತಿದೆ. ಸೈನ್ಯದಲ್ಲಿ ಸೇವೆ ಸಲ್ಲಿಸಿದ ಯುವಜನರು ಭದ್ರತೆ ಕೇಳಿಕೊಂಡು ಬೀದಿಗೆ ಬಂದಾಗ ಅವರ ಮೇಲೆ ಲಾಠಿ ಚಾರ್ಜ್ ಮಾಡಿಸಿತು!

ಆದರೆ ಸಂವಿಧಾನ ಹೇಳಿದ್ದೇನು?: ಸಂವಿಧಾನದ ಆರ್ಟಿಕಲ್ 16 ರ ಪ್ರಕಾರ "ಪ್ರಭುತ್ವವು ಜಾತಿ, ಧರ್ಮ, ಲಿಂಗ, ಜಾನಾಂಗೀಯತೆ, ಜನರು ವಾಸವಿರುವ ಹಾಗೂ ಹುಟ್ಟಿದ ಜಾಗದ ಆಧಾರದ ಮೇಲೆ ಯಾವುದೇ ತಾರತಮ್ಯವನ್ನು ಮಾಡದೇ, ಅವರ ವ್ಯಕ್ತಿ ಗೌರವಕ್ಕೆ ಧಕ್ಕೆ ಆಗದೆ ಸಮಾನವಾಗಿ ಯಾವುದೇ ಕಾರ್ಯಕ್ಷೇತ್ರ ಅಥವಾ ಕಛೇರಿಯಲ್ಲಿ ಉದ್ಯೋಗ ನೀಡುವ ಪ್ರಯತ್ನವನ್ನು ಪ್ರಭುತ್ವ ಮಾಡಬೇಕು" ಎಂದು ಹೇಳುತ್ತದೆ. ಆದರೆ ಗುತ್ತಿಗೆ ಪದ್ಧತಿ ಸಂವಿಧಾನದ ಈ ಆಶಯದ ಸ್ಪಷ್ಟ ಉಲ್ಲಂಘನೆ ಅಲ್ಲವೇ?

ಚುನಾವಣೆಯ ಸಂದರ್ಭದಲ್ಲಿ ನಾವು ಕೇಳುತ್ತಿರುವುದೇನು? ಚುನಾವಣಾ ಆಯೋಗದ ನಿರ್ದೇಶನಗಳನ್ನೂ ಮೀರಿ ರಾಜಕೀಯ ಪಕ್ಷಗಳು ಜಾತಿ, ಧರ್ಮದ ಹೆಸರಿನಲ್ಲಿ ದ್ವೇಷವನ್ನು ಕಾರುತ್ತಿದೆ. ಹಣ, ಹೆಂಡದ, ವಯಕ್ತಿಕ ದ್ವೇಷದ ಮೇಲೆ ರಾಜಕೀಯ ನಡೆಯುತ್ತಿದೆ. ಜನರ ಜೀವನಕ್ಕೆ ಸಂಬಂಧ ಪಡದ ಈ ವಿಚಾರಗಳನ್ನು ಬಿಟ್ಟು ಉಚಿತ ಗುಣಮಟ್ಟದ ಸಮಾನ ಶಿಕ್ಷಣ, ಓದಿಗೆ ತಕ್ಕ ಸುಭದ್ರ ಉದ್ಯೋಗ ಎಂಬ ನೈಜ ವಿಚಾರದ ಮೇಲೆ ಸಕಾರಾತ್ಮಕ ಸ್ಪರ್ಧೆಯನ್ನು ಪಕ್ಷಗಳು ಮಾಡಬೇಕು ಎಂದು ಒತ್ತಾಯಿಸುತ್ತೇವೆ. ಮತ್ತು ರಾಜ್ಯದ ಎಲ್ಲಾ ವಿದ್ಯಾರ್ಥಿಗಳು ಮತ್ತು ಪೋಷಕರ ಪರವಾಗಿ ನಮ್ಮ ಈ ಕೆಳಗಿನ ಹಕ್ಕೊತ್ತಾಯವನ್ನು ವಿದ್ಯಾರ್ಥಿ ಪ್ರಣಾಳಿಕೆಯ ಮೂಲಕ ದೇಶದ ಮುಂದಿಡುತ್ತಿದ್ದೇವೆ.



# ಶಿಕ್ಷಣ

1. ರಾಷ್ಟ್ರೀಯ ಶಿಕ್ಷಣ ನೀತಿ – 2020 ಅನ್ನು ರದ್ದುಗೊಳಿಸಿ ಮತ್ತು NCF – 2023 ಸೇರಿದಂತೆ NEP ಯ ಎಲ್ಲಾ ಅಂಶಗಳ ಅನುಷ್ಠಾನವನ್ನು ಕೂಡಲೇ ರದ್ದುಗೊಳಿಸಬೇಕು. ವಿಧ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಿಟ್ಟುಕೊಂಡೇ ಈ ಪ್ರಕ್ರಿಯೆಯನ್ನು ಜಾರಿಗೊಳಿಸಬೇಕು.
2. ಖಾಸಗಿ ಅನುದಾನರಹಿತ ಸಂಸ್ಥೆಗಳನ್ನೂ ಸೇರಿದಂತೆ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಮತ್ತು ಸಿಬ್ಬಂದಿಗಳ (ಬೋಧಕ ಮತ್ತು ಬೋಧಕೇತರ) ನೇಮಕಾತಿ ಮತ್ತು ಬಡ್ತಿಯ ಪ್ರಕ್ರಿಯೆಯಲ್ಲಿ ಎಸ್ಸಿ, ಎಸ್ಟಿ, ಒಬಿಸಿ, ವಿಕಲಚೇತನರು ಮತ್ತು ಟ್ರಾನ್ಸ್‌ಜೆಂಡರ್ ಸಮುದಾಯದ ಮೀಸಲಾತಿಗಳು ಅನ್ವಯವಾಗುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.
3. SC, ST, OBC, ಟ್ರಾನ್ಸ್‌ಜೆಂಡರ್ ಗಳ ಸಮುದಾಯ ಮತ್ತು ವಿಕಲಾಂಗ ವ್ಯಕ್ತಿಗಳಿಗೆ ನೀಡಲಾಗಿರುವ ಮೀಸಲಾತಿಯ ಅನುಷ್ಠಾನವನ್ನು ಸರ್ಕಾರ ಖಚಿತಪಡಿಸಬೇಕು
4. ಸಾಂವಿಧಾನಿಕ ತಿದ್ದುಪಡಿಯ ಮೂಲಕ ಶಿಕ್ಷಣದ ವಿಷಯವನ್ನು ವಾಪಸ್ಸು ರಾಜ್ಯಗಳ ಪಟ್ಟಿಗೆ ವರ್ಗಾಯಿಸಬೇಕು.
5. ಶಿಕ್ಷಣವನ್ನು ಕಾರ್ಪೊರೇಟೀಕರಿಸುವ, ವಾಣಿಜ್ಯೀಕರಿಸುವ, ಕೋಮುವಾದಿಕರಿಸುವ, ಕೇಂದ್ರೀಕರಿಸುವ ಪ್ರಯತ್ನಗಳನ್ನು ಈ ಕೂಡಲೇ ನಿಲ್ಲಿಸಬೇಕು. ಶಿಕ್ಷಣದಲ್ಲಿ ಸಾಮಾಜಿಕ ತಾರತಮ್ಯ ಬೇರೂರುವುದನ್ನು ಮತ್ತು ಶಿಕ್ಷಣವು ಅಧಿಕಾರಶಾಹಿಯ ಕೈಗೊಂಬೆಯಾಗುವುದನ್ನು ತಡೆಯಬೇಕು.
6. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಗುತ್ತಿಗೆಯ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದನ್ನು ಈ ಕೂಡಲೇ ನಿಲ್ಲಿಸಬೇಕು. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಶಿಕ್ಷಣೇತರ ಕಾರ್ಯಗಳಿಗೆ ಮತ್ತು ಪ್ರಚಾರಕ್ಕೆ ನಿಯೋಜಿಸುವುದನ್ನು ನಿಲ್ಲಿಸಬೇಕು
7. ಶಿಕ್ಷಣ ಹಕ್ಕು ಕಾಯಿದೆಯ ಸಮರ್ಪಕ ಮತ್ತು ಪರಿಣಾಮಕಾರಿ ಅನುಷ್ಠಾನವನ್ನು ಖಾತ್ರಿಪಡಿಸಬೇಕು. ಇದು ಅಂಗವಿಕಲ ಮಕ್ಕಳನ್ನೂ ಸೇರಿದಂತೆ ಎಲ್ಲಾ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವ ಮೂಲಕ, ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ 21ನೇ ಪರಿಚ್ಛೇದವನ್ನು ಜಾರಿಗೊಳಿಸುವ ಕಾಯ್ದೆಯಾಗಿದ್ದು, ಇದರಡಿ ಒದಗಿಸಬೇಕಾದಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ತಕ್ಷಣವೇ ಒದಗಿಸಬೇಕು
8. ಕೊಠಾರಿ ಆಯೋಗವು ಶಿಕ್ಷಣಕ್ಕಾಗಿ ಸರ್ಕಾರವು ಜಿಡಿಪಿಯಲ್ಲಿ ಕನಿಷ್ಠ 6% ರಷ್ಟು ಖರ್ಚು ಮಾಡಬೇಕು ಎಂದು ಶಿಫಾರಸ್ಸು ಮಾಡಿತ್ತು. ಇದನ್ನೇ ಹಲವು ಆಯೋಗಗಳು ಪದೇ ಪದೇ ಪುನರುಚ್ಚರಿಸಿವೆ. ಆದಾಗ್ಯೂ, ದಶಕಗಳಿಂದಲೂ ಶಿಕ್ಷಣಕ್ಕಾಗಿ ಸರ್ಕಾರ ವ್ಯಯಿಸುತ್ತಿರುವುದು ಜಿಡಿಪಿಯ ಸುಮಾರು 2.9% ರಿಂದ 3.4% ಮಾತ್ರ. ಇದರಲ್ಲಿ ಯಾವುದೇ ಏರಿಕೆ ಕಂಡುಬರುತ್ತಿಲ್ಲ. ಶಿಕ್ಷಣಕ್ಕೆ ಅನುದಾನ ನೀಡಲಿಕ್ಕೆ ಹಿಂದು-ಮುಂದು ನೋಡುವ ಸರ್ಕಾರಗಳು ತಮ್ಮ ನಿಲುವುಗಳನ್ನು ಈ ಕೂಡಲೇ ಬದಲಿಸಿಕೊಳ್ಳಬೇಕೆಂದು ಒತ್ತಾಯಿಸುತ್ತೇವೆ.
9. ಪ್ರಸ್ತುತ, 6–14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವ ಕಾಯ್ದೆಯು ಉನ್ನತ ಶಿಕ್ಷಣ ಮತ್ತು ಬಾಲ್ಯದಲ್ಲಿ ಮಕ್ಕಳಿಗೆ ನೀಡಬೇಕಿರುವ ಆರೈಕೆ ಮತ್ತು ಶಿಕ್ಷಣವನ್ನು ಅದರ ವ್ಯಾಪ್ತಿಯಿಂದ ಹೊರಗಿಡುತ್ತದೆ.ಶಿಕ್ಷಣ ಹಕ್ಕು ಕಾಯ್ದೆಯು ಇವನ್ನು ಕೂಡ ಖಾತ್ರಿಪಡಿಸುವಂತೆ ಕಾಯ್ದೆಗೆ ಸೂಕ್ತ ತದ್ದುಪಡಿಗಳನ್ನು ತರಬೇಕು.
10. ಪ್ರತಿ ಜಿಲ್ಲೆಯಲ್ಲಿಯೂ ದಲಿತರು, ಆದಿವಾಸಿಗಳು, ಒಬಿಸಿಗಳು ಮತ್ತು ಅಲ್ಪಸಂಖ್ಯಾತರಿಗೆ ಸೂಕ್ತ ಸೌಲಭ್ಯಗಳು ಮತ್ತು ಸೇವೆಗಳನ್ನು ಒದಗಿಸುವ, ಅಗತ್ಯಕ್ಕೆ ಅನುಗುಣವಾಗಿ ವಸತಿ ನಿಲಯಗಳನ್ನು ಸ್ಥಾಪಿಸಬೇಕು.

ಈ ಬೇಡಿಕೆಗಳ ಜೊತೆಗೆ, ಪ್ರಾಥಮಿಕ ಮತ್ತು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ನಿರ್ದಿಷ್ಟ ಬೇಡಿಕೆಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ:



# ಪ್ರಾಥಮಿಕ ಶಿಕ್ಷಣ

1. ಸರ್ಕಾರಿ ಶಾಲೆಗಳು ಮತ್ತು ಅಂಗನವಾಡಿಗಳನ್ನು ಮುಚ್ಚುವ/ವಿಲೀನಗೊಳಿಸುವ ನಿಟ್ಟಿನಲ್ಲಿ ಹಲವು ಪ್ರಯತ್ನಗಳು ಜಾರಿಯಲ್ಲಿವೆ. ಇದು ಕೇವಲ ಸಾರ್ವಜನಿಕ ಶಾಲಾ ವ್ಯವಸ್ಥೆಯ ಮೇಲಿನ ಆಕ್ರಮಣವಲ್ಲ. ಬದಲಿಗೆ, ಇದು ವಿದ್ಯಾರ್ಥಿಗಳನ್ನು, ವಿಶೇಷವಾಗಿ ಅಂಚಿನಲ್ಲಿರುವ ಸಮುದಾಯಗಳನ್ನು ಶಿಕ್ಷಣ ವ್ಯವಸ್ಥೆಯಿಂದ ಹೊರದೂಡುತ್ತದೆ. ಆದ್ದರಿಂದ, ಅಂತಹ ಯಾವುದೇ ಪ್ರಯತ್ನಗಳನ್ನು ತಕ್ಷಣವೇ ನಿಲ್ಲಿಸಬೇಕು. ಇದಕ್ಕೆ ವ್ಯತಿರಿಕ್ತವಾಗಿ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ಅಗತ್ಯ ಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ನಾವು ಸರ್ಕಾರಗಳನ್ನು ಒತ್ತಾಯಿಸುತ್ತೇವೆ.
2. ಎಲ್ಲಾ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು, ನೋಟ್ ಪುಸ್ತಕಗಳು, ಸಮವಸ್ತ್ರಗಳು, ಬೈಸಿಕಲ್, ವಿದ್ಯಾರ್ಥಿವೇತನ ಇತ್ಯಾದಿಗಳನ್ನು ಸಕಾಲದಲ್ಲಿ ಒದಗಿಸಿಬೇಕು. ಸರ್ಕಾರಿ ಶಾಲೆಗಳಲ್ಲಿ ಈ ಎಲ್ಲಾ ಸಾಮಗ್ರಿ-ಸೌಕರ್ಯಗಳನ್ನು ಒದಗಿಸಲು ಪ್ರಸ್ತುತ ಆಧಾರ್ ಆಧಾರಿತ, ನೇರ ಪಾವತಿ ವ್ಯವಸ್ಥೆಯನ್ನು ಬಳಸಲಾಗುತ್ತಿದ್ದು ಇದನ್ನು ನಿಲ್ಲಿಸಿ, ಅದರ ಬದಲಿಗೆ ಜನ-ಸ್ನೇಹಿ ವ್ಯವಸ್ಥೆಯನ್ನು ಕಂಡುಕೊಳ್ಳಬೇಕು.
3. ನೆರೆಹೊರೆ ಶಾಲೆಗಳ ಪರಿಕಲ್ಪನೆಯ ಆಧಾರದಲ್ಲಿ ಸಾಮಾನ್ಯ ಶಾಲಾ ವ್ಯವಸ್ಥೆ ಸೇರಿದಂತೆ ಕೆಜಿಯಿಂದ ಪಿಜಿವರೆಗೆ ಎಲ್ಲರಿಗೂ ಸಮಾನ, ಗುಣಮಟ್ಟದ, ಉಚಿತ, ನ್ಯಾಯಯುತ ಮತ್ತು ಜಾತ್ಯತೀತ ಶಿಕ್ಷಣಕ್ಕಾಗಿ ಎಲ್ಲಾ ಖರ್ಚುಗಳನ್ನು ಸರ್ಕಾರವೇ ಭರಿಸುವಂತಹ ಸಮಾನ ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸಿ .2017 ರ ಸಬಲೀಕರಣ ವರದಿಯ ಶಿಫಾರಸ್ಸಿನಂತೆ ಸಮಾನ ಗುಣಮಟ್ಟದ ಸಮಾನ ಶಾಲಾ ಶಿಕ್ಷಣವನ್ನು ಹಂತ-ಹಂತವಾಗಿ ಆಚರಣೆಗೆ ತರಬಹುದು. ಪೂರ್ವ ಪ್ರಾಥಮಿಕ ಹಂತದಿಂದ IV ನೇ ತರಗತಿಯವರೆಗೆ ಗ್ರಾಮ ಮಟ್ಟದಲ್ಲಿ ಮತ್ತು ಪೂರ್ವ ಪ್ರಾಥಮಿಕ ಹಂತದಿಂದ 12 ನೇ ತರಗತಿಯವರೆಗೆ ಪಂಚಾಯತ್/ವಾರ್ಡ್ ಮಟ್ಟದ ಹಗಲು/ವಸತಿ ಶಾಲೆಗಳನ್ನು ತೆರೆಯಬೇಕು.
4. ಮಧ್ಯಾಹ್ನದ ಬಿಸಿಯೂಟದ ಯೋಜನೆಗಳ ಜೊತೆಗೆ ಉಪಹಾರ ಯೋಜನೆಯನ್ನೂ ಜಾರಿಗೆ ತಂದು ಅಪೌಷ್ಟಿಕತೆಯ ನಿರ್ಮೂಲನೆಗೆ ಮುಂದಾಗಿ ಅದನ್ನು ಖಚಿತಪಡಿಸಿಕೊಳ್ಳಬೇಕು. (ಈ ಉಪಹಾರ ಯೋಜನೆಯಡಿಯಲ್ಲಿ ದಿನವೂ ಮಕ್ಕಳಿಗೆ ಹಾಲು ಮತ್ತು ಇತರ ಪೌಷ್ಟಿಕಾಂಶ ಒದಗಿಸುವ ಆಹಾರವನ್ನು ಒದಗಿಸಬೇಕು). ಹೆಚ್ಚುವರಿಯಾಗಿ, ಅಂಗನವಾಡಿಯಿಂದ 10 ನೇ ತರಗತಿವರೆಗಿನ ಮೊಟ್ಟೆ ಸೇವಿಸುವ ವಿದ್ಯಾರ್ಥಿಗಳೆಲ್ಲರಿಗೂ ಅದನ್ನು ಒದಗಿಸಬೇಕು.
5. ಸರ್ಕಾರಿ ಶಾಲೆಗಳಲ್ಲಿ ಪ್ರಜಾಸತ್ತಾತ್ಮಕವಾಗಿ ರಚನೆಯಾದ ಮತ್ತು ಸಾಂವಿಧಾನಿಕವಾಗಿ ಕಾರ್ಯನಿರ್ವಹಿಸುತ್ತಿರುವ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಗಳಿಗೆ (SDMC) ಸೂಕ್ತ ತರಬೇತಿಯನ್ನು ಒದಗಿಸಬೇಕು.
6. ಮಾದರಿ ಶಾಲೆಗಳು, ಎಮಿನೆನ್ಸ್ ಶಾಲೆಗಳು, PMSHRI ಶಾಲೆಗಳು ಮುಂತಾದ ವಿವಿಧ ಹೆಸರುಗಳ ಅಡಿಯಲ್ಲಿ ಶಾಲೆಗಳ ಯಾವುದೇ ಶ್ರೇಣೀಕರಣವನ್ನು ನಿಲ್ಲಿಸಬೇಕು.
7. ಖಾಸಗಿ ಶಾಲೆಗಳಲ್ಲಿ (ಅನುದಾನಿತ ಮತ್ತು ಅನುದಾನರಹಿತ) ಮಕ್ಕಳ ಮತ್ತು ಪೋಷಕರ ಹಿತಾಸಕ್ತಿಗಳನ್ನು ಕಾಪಾಡಲು, ಹೆಚ್ಚಿನ ರಾಜ್ಯಗಳಲ್ಲಿ ಈಗಾಗಲೇ ಜಾರಿಯಲ್ಲಿರುವಂತೆ, ಪೋಷಕರ ಒಳಗೊಳ್ಳುವಿಕೆಯನ್ನು ಖಾತ್ರಿಗೊಳಿಸುವ, ಖಾಸಗಿ ಶಾಲೆಗಳನ್ನು ಜನಸಾಮಾನ್ಯರಿಗೆ ಉತ್ತರದಾಯಿಯಾಗಿಸುವ, ಶುಲ್ಕ ನಿಯಂತ್ರಣ, ಶಾಲೆಗಳು ಒದಗಿಸಬೇಕಾದ ಶಿಕ್ಷಣದ ಕನಿಷ್ಠ ಗುಣಮಟ್ಟ ಮತ್ತು ಇನ್ನಿತರೆ ಎಲ್ಲಾ ಆಯಾಮಗಳನ್ನು ಒಳಗೊಂಡ, ಕಟ್ಟುನಿಟ್ಟಾದ ಕಾನೂನುಗಳನ್ನು ರೂಪಿಸಿ ಅದನ್ನು ಜಾರಿಗೊಳಿಸಬೇಕು. ಪೋಷಕರ ಒಳಗೊಳ್ಳುವಿಕೆಗೆ ಪೂರಕವಾದ ರಚನೆ ತೆಗೆದುಕೊಳ್ಳಬೇಕು.

# ಉನ್ನತ ಶಿಕ್ಷಣ



1. FYUP, CUET, NEET ಮತ್ತು JEE ಮತ್ತು ಇತರ ರೀತಿಯ ಕೇಂದ್ರೀಕೃತ ಪ್ರವೇಶ ಪರೀಕ್ಷೆಗಳನ್ನು ರದ್ದುಪಡಿಸಿ ಮತ್ತು ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರಗಳ ಹಕ್ಕುಗಳನ್ನು ಗೌರವಿಸಬೇಕು.
2. ಆನ್ಲೈನ್ ಶಿಕ್ಷಣವನ್ನು ನಿಲ್ಲಿಸಿ; ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ; ಮತ್ತು ದೂರಶಿಕ್ಷಣದ ಅಡಿಯಲ್ಲಿ ದಾಖಲಾದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಓದುವ ಸಾಮಗ್ರಿಗಳನ್ನೂ ಬೋಧನಾ ವ್ಯವಸ್ಥೆಗಳನ್ನೂ ಒದಗಿಸಬೇಕು.
3. ವಿದೇಶಿ ವಿಶ್ವವಿದ್ಯಾಲಯಗಳು ಭಾರತದಲ್ಲಿ ಕ್ಯಾಂಪಸ್ಗಳನ್ನು ಸ್ಥಾಪಿಸುವುದನ್ನು ನಿಷೇಧಿಸಬೇಕು.
4. ಸರ್ಕಾರಗಳು ವಿಶ್ವವಿದ್ಯಾನಿಲಯಗಳ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡಬಾರದು. ವಿಶ್ವವಿದ್ಯಾಲಯಗಳ ಸ್ವಾಯತ್ತತೆಯನ್ನು ಗೌರವಿಸಬೇಕು ಮತ್ತು ವಿಶ್ವವಿದ್ಯಾಲಯಗಳು ತಮ್ಮದೇ ಆದ ನಿಯಮಗಳಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡಬೇಕು.
5. ಇತಿಹಾಸವನ್ನು ತಿರುಚುವ ಮತ್ತು ಮೌಢ್ಯತೆ/ಮೂಢನಂಬಿಕೆಗಳನ್ನು ಬಿತ್ತುವ ಕೋರ್ಸ್ಗಳನ್ನು ವಿಶ್ವವಿದ್ಯಾಲಯಲ್ಲಿ ಪರಿಚಯಿಸುವುದನ್ನು ಈ ಕೂಡಲೇ ನಿಲ್ಲಿಸಬೇಕು.
6. ಶಿಕ್ಷಣದಲ್ಲಿ ಸಾಮಾಜಿಕ ನ್ಯಾಯವನ್ನು ಪುನಃಸ್ಥಾಪಿಸಲು ಮತ್ತು ವಿಸ್ತರಿಸಲು ಎಲ್ಲಾ ರೀತಿಯ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. SC, ST, OBC, PwBD ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಲು ವಿಶೇಷ ಕೋಚಿಂಗ್ ಸೌಲಭ್ಯಗಳನ್ನು ಒದಗಿಸಬೇಕು. ವಿದ್ಯಾರ್ಥಿವೇತನಗಳು/ಫೆಲೋಶಿಪ್ಗಳನ್ನು ನೀಡಬೇಕು ಮತ್ತು ಮೀಸಲಾತಿಯ ಜಾರಿಯನ್ನು ಖಾತ್ರಿಪಡಿಸಿಕೊಳ್ಳಬೇಕು. ಇನ್ನೂ ನೇಮಕಾತಿಯಾಗಿರದ ಬ್ಯಾಕ್ ಲಾಗ್ ಹುದ್ದೆಗಳನ್ನು ಕೂಡ ಭರ್ತಿ ಮಾಡಬೇಕು.
7. ಸಾಂಸ್ಥಿಕ ತಾರತಮ್ಯವನ್ನು (Institutional Discrimination) ಅನ್ನು ನಿರ್ಮೂಲನೆ ಮಾಡಲು ರೋಹಿತ್ ಕಾಯ್ದೆಯನ್ನು ಜಾರಿಗೊಳಿಸಬೇಕು. ಅಲ್ಲದೇ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಲೈಂಗಿಕತೆ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲು ಅರೆ-ನ್ಯಾಯಾಂಗ ಅಧಿಕಾರ ಹೊಂದಿರುವ ಲೈಂಗಿಕ ಕಿರುಕುಳಗಳ ವಿರುದ್ಧ ಲಿಂಗ ಸಂವೇದನಾ ಸಮಿತಿ (GS–CASH)ಗಳನ್ನು ಎಲ್ಲಾ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಸ್ಥಾಪಿಸಬೇಕು.
8. ಎಸ್ಸಿ/ಎಸ್ಟಿ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಸಮಸ್ಯೆಗಳನ್ನು ಪರಿಹರಿಸಲು ಪ್ರತ್ಯೇಕ ಕೋಶಗಳನ್ನು ಎಲ್ಲಾ ಪ್ರತಿ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ಸ್ಥಾಪಿಸಬೇಕು ಎಂದು ಯು.ಜಿ.ಸಿ. ಈಗಾಗಲೇ ಆದೇಶಿಸಿದೆ. ಯುಜಿಸಿ ಮಾರ್ಗಸೂಚಿಗಳು – 1998 ರ ಪ್ರಕಾರ ಈ ಕೋಶಗಳನ್ನು ಸ್ಥಾಪಿಸಬೇಕು ಮತ್ತು ಅದರ ನಿಯಮಗಳಡಿಯಲ್ಲಿ ಈ ಕೋಶಗಳು ಕಾರ್ಯನಿರ್ವಹಿಸಬೇಕು.

9. ಎಲ್ಲಾ ವಿಶ್ವವಿದ್ಯಾನಿಲಯಗಳೂ, ಕಾಲೇಜುಗಳೂ ವಿಕಲಾಂಗ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸ್ನೇಹಿಯಾಗಿಸಬೇಕು. ಅಲ್ಲದೇ, ವಿಕಲಾಂಗ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಮಗ್ರಿಗಳನ್ನು ಒದಗಿಸಬೇಕು.
10. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಜಾಪ್ರಭುತ್ವ, ಶೈಕ್ಷಣಿಕ ಸ್ವಾಯತ್ತತೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮರುಸ್ಥಾಪಿಸಿ. ಎಲ್ಲಾ ಕಾಲೇಜು, ವಿಶ್ವವಿದ್ಯಾಲಯಗಳು ವಿದ್ಯಾರ್ಥಿ ಸಂಘವನ್ನು ಮಾನ್ಯಮಾಡಬೇಕು. ಪ್ರಜಾಸತ್ತಾತ್ಮಕ ಚುನಾವಣೆಗಳು ಮತ್ತು ಪ್ರಕ್ರಿಯೆಗಳನ್ನು ವಿದ್ಯಾರ್ಥಿ ಸಂಘದ ಕಾರ್ಯಚಟುವಟಿಕೆಗಳ ಬುನಾದಿಯನ್ನಾಗಿಸಬೇಕು.
11. ಶಿಕ್ಷಣ ಸಂಸ್ಥೆಗಳಿಗೆ ಯಾವುದೇ ರಾಜಕೀಯ ನೇಮಕಾತಿಗಳನ್ನು ತಕ್ಷಣವೇ ನಿಲ್ಲಿಸಬೇಕು.
12. ಮತ್ತಷ್ಟು ಸಾರ್ವಜನಿಕ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳನ್ನು ಸ್ಥಾಪಿಸಬೇಕು ಮತ್ತು ಅವುಗಳನ್ನು ಬಲಪಡಿಸಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡು, ಎಲ್ಲೆಡೆಯೂ ಅಣಬೆಗಳಂತೆ ಹುಟ್ಟಿಕೊಳ್ಳುತ್ತಿರುವ ಖಾಸಗಿ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳ ಹಾವಳಿಯನ್ನು ನಿಲ್ಲಿಸಬೇಕು.
13. ಶಿಕ್ಷಣ ಕ್ಷೇತ್ರದ ಬಗ್ಗೆ ಕಾಳಜಿ ಹೊಂದಿರುವ, ಶಿಕ್ಷಣ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಂಡರು ಮತ್ತು ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಸಮುದಾಯದ ಬೇಡಿಕೆಗಳಿಗೆ ಸ್ಪಂದಿಸುವಂತಹ ಅರ್ಹ ವ್ಯಕ್ತಿಗಳನ್ನು ಮಾತ್ರವೇ ಶಿಕ್ಷಣಕ್ಕೆ ಸಂಬಂಧಿಸಿದ ಇಲಾಖೆಗಳ ಮಂತ್ರಿಗಳನ್ನಾಗಿ ನೇಮಿಸಬೇಕು.
14. ಮುಂದೆ ಸ್ಥಾಪಿಸಲಾಗುವ ಎಲ್ಲಾ ಸಾರ್ವಜನಿಕ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳಲ್ಲಿಯೇ ಸ್ಥಾಪಿಸಬೇಕು.
15. ದೇಶದ ಪ್ರತಿ ಜಿಲ್ಲೆಯಲ್ಲಿಯೂ ಕನಿಷ್ಠ ಒಂದು ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯನ್ನು ಸ್ಥಾಪಿಸಬೇಕು.
16. ಖಾಸಗಿ ಕಾಲೇಜುಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ (ಅನುದಾನಿತ ಮತ್ತು ಅನುದಾನರಹಿತ) ಮಕ್ಕಳ ಮತ್ತು ಪೋಷಕರ ಹಿತಾಸಕ್ತಿಗಳನ್ನು ಕಾಪಾಡಲು, ಪೋಷಕರ ಒಳಗೊಳ್ಳುವಿಕೆಯನ್ನು ಖಾತ್ರಿಗೊಳಿಸುವ, ಖಾಸಗಿ ಕಾಲೇಜು-ವಿಶ್ವವಿದ್ಯಾಲಯಗಳನ್ನು ಜನಸಾಮಾನ್ಯರಿಗೆ ಉತ್ತರದಾಯಿಯಾಗಿಸುವ, ಶುಲ್ಕ ನಿಯಂತ್ರಣ ಕಾಲೇಜು-ವಿಶ್ವವಿದ್ಯಾಲಯಗಳು ಒದಗಿಸಬೇಕಾದ ಶಿಕ್ಷಣದ ಕನಿಷ್ಠ ಗುಣಮಟ್ಟ ಮತ್ತು ಇನ್ನಿತರೆ ಎಲ್ಲಾ ಆಯಾಮಗಳನ್ನು ಒಳಗೊಂಡ, ಕಟ್ಟುನಿಟ್ಟಾದ ಕಾನೂನುಗಳನ್ನು ರೂಪಿಸಿ ಅದನ್ನು ಜಾರಿಗೊಳಿಸಬೇಕು.

# ಉದ್ಯೋಗ



ಈ ಹಿಂದೆ ಭಾರತೀಯ ಜನತಾ ಪಕ್ಷ (ಬಿಜೆಪಿ) ನಿರುದ್ಯೋಗ ನಿವಾರಣೆಯ ಮಾಡುತ್ತೇವೆ ಎಂದು ಯುವಜನತೆಗೆ ಮಾತು ನೀಡಿ ಅಧಿಕಾರದ ಚುಕ್ಕಾಣಿ ಹಿಡಿದಿತ್ತು. ಈಗಿನ ಪ್ರಧಾನಿ, ನರೇಂದ್ರ ಮೋದಿ ಅವರು ತಮ್ಮ ಸರ್ಕಾರ 2 ಕೋಟಿ ಹೊಸ ಉದ್ಯೋಗಗಳನ್ನು ಸೃಷ್ಟಿಸುವುದಾಗಿ ಭರವಸೆ ನೀಡಿದ್ದರು. ಬಿಜೆಪಿ ಸರ್ಕಾರದ ದಿವಾಳಿತನವು ಕಳೆದ 10 ವರ್ಷಗಳ ಆಡಳಿತದಲ್ಲಿ ಮತ್ತೆ ಮತ್ತೆ ಬೆಳಕಿಗೆ ಬಂದಿದೆ. ಈ ಅವಧಿಯಲ್ಲಿ, ದೇಶದ ನಿರುದ್ಯೋಗ ದರವು ೪೫ ವರ್ಷಗಳಲ್ಲಿಯೇ ಅತ್ಯಂತ ಗರಿಷ್ಠ ಮಟ್ಟವನ್ನು ತಲುಪಿದೆ. ಇದರಿಂದಾಗಿ ಯುವಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಈ ದೇಶದ ಯುವಜನತೆಯು ತಮ್ಮ ಭವಿಷ್ಯದ ಬಗ್ಗೆ ಚಿಂತಿಸುವಂತಾಗಿದೆ. ನಡುವೆ ಈ ಹಿಂದೆ ಭಾರತವು ಆರ್ಥಿಕವಾಗಿ ಬೆಳೆಯುತ್ತಿದ್ದರೂ ಉದ್ಯೋಗ ಸೃಷ್ಟಿಯಾಗುತ್ತಿಲ್ಲ ಎಂಬ ಪರಿಸ್ಥಿತಿಯಿತ್ತು. ಆದರೆ 2012 ಮತ್ತು 2018 ರ ನಡುವೆ ಉದ್ಯೋಗ ಸೃಷ್ಟಿಯಾಗುವುದರಲಿ, ಇದ್ದ ಅಷ್ಟಿಷ್ಟು ಉದ್ಯೋಗವೂ ನಷ್ಟವಾಗಿದೆ ಎಂದು ವಿವಿಧ ವರದಿಗಳು ಸೂಚಿಸಿವೆ! ಕೋವಿಡ್ ನಂತರದ ಅವಧಿಯಲ್ಲಿ ನಿರುದ್ಯೋಗದ ಸಮಸ್ಯೆ ಮತ್ತಷ್ಟು ಉಲ್ಬಣಗೊಂಡಿದೆ! ಇದು ಈ ದೇಶದ ವಿದ್ಯಾರ್ಥಿಗಳು ಮತ್ತು ಯುವಜನರ ಮೇಲೆ ಮಾತ್ರವಲ್ಲದೆ, ದೇಶದ ಆರ್ಥಿಕತೆಯ ಮೇಲೂ ಅಡ್ಡ ಪರಿಣಾಮಗಳನ್ನು ಬೀರುತ್ತಿದೆ. ಈ ಪರಿಸ್ಥಿತಿಯನ್ನು ಈ ತಕ್ಷಣವೇ ಸರಿಪಡಿಸಲು ಮುಂದಾಗಬೇಕು. ಈ ನಿಟ್ಟಿನಲ್ಲಿ, ಈ ಕೆಳಗಿನ ನಮ್ಮ ಒತ್ತಾಯಗಳನ್ನು ಮಂಡಿಸುತ್ತಿದ್ದೇವೆ ಮತ್ತು ಇವುಗಳನ್ನು ಸರ್ಕಾರ ಜಾರಿಗೊಳಿಸಬೇಕೆಂದು ಆಗ್ರಹಿಸುತ್ತೇವೆ:

1. ಸರ್ಕಾರಿ ವ್ಯವಸ್ಥೆಯಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು. ಸರ್ಕಾರದ ಕಾರ್ಯಕ್ಷೇತ್ರಗಳಲ್ಲಿ ಸಾಕಷ್ಟು ಜನರು ಕಾರ್ಮಿಕರಿಲ್ಲದೆ ವ್ಯವಸ್ಥೆಯು ಬಳಲುತ್ತಿದ್ದರೂ, ಸರ್ಕಾರಿ ಇಲಾಖೆಗಳಲ್ಲಿ ಮತ್ತು ಅರೆ-ಸರ್ಕಾರಿ ಸಂಸ್ಥೆಗಳಲ್ಲಿ ಬರೋಬ್ಬರಿ 9.4 ಲಕ್ಷ ಹುದ್ದೆಗಳಿಗೆ ನೇಮಕಾತಿಯೇ ನಡೆದಿಲ್ಲ. ಈ ವಿಚಾರವು ದೇಶದ ಪ್ರತಿಯೊಬ್ಬ ನಾಗರಿಕರನ್ನೂ ಕೆರಳಿಸುತ್ತದೆ. ಈ ಹುದ್ದೆಗಳಿಗೆ ನೇಮಕಾತಿ ನಡೆದರೆ ಯುವಜನರಿಗೆ ಉದ್ಯೋಗ ನೀಡುತ್ತದೆ ಮಾತ್ರವಲ್ಲ, ಸರ್ಕಾರದ ಕಾರ್ಯಕ್ಷೇತ್ರವನ್ನೂ ಬಲಪಡಿಸುತ್ತದೆ.
2. ಹೊಸ ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಿ ಮತ್ತು ಎಲ್ಲಾ ವಲಯವಾರು ಕಾನೂನು-ಕಾಯ್ದೆಗಳನ್ನು ಮರುಸ್ಥಾಪಿಸಿ. ಅದು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ (BOCW) ಸಂಬಂಧಿಸಿದ ಎರಡು ಕಾಯ್ದೆಗಳಿರಬಹುದು, ಪ್ಲಾಂಟೇಶನ್ ಕಾರ್ಮಿಕರ ಕಾಯ್ದೆಯಿರಬಹುದು, ಮೋಟಾರು ಸಾರಿಗೆ ಕಾರ್ಮಿಕರ ಕಾಯ್ದೆಯಿರಬಹದು ಅಥವಾ ಬೀಡಿ ಮತ್ತು ಉಪ್ಪಿನ ಕಾರ್ಮಿಕರ ಕಲ್ಯಾಣಕ್ಕಾಗಿ ಮೀಸಲಿಡಲಾಗಿರುವ ಸೆಸ್ ಮತ್ತು ಕಲ್ಯಾಣ ಯೋಜನೆಗಳೇ ಇರಬಹದು. ಈ ಎಲ್ಲಾ ಕಾನೂನುಗಳನ್ನು ಮರುಸ್ಥಾಪಿಸಿ.

3. ಅಲ್ಲದೇ, ಈ ದೇಶದ ಎಲ್ಲಾ ವರ್ಗಗಳ ಕಾರ್ಮಿಕರ ಹಿತವನ್ನು ಕಾಪಾಡುವ ಮತ್ತು ಸಮಗ್ರ ಕಾಯ್ದೆಯೊಂದನ್ನು ರೂಪಿಸಬೇಕೆಂದು ಯುವಜನರು ಆಗ್ರಹಿಸುತ್ತಿದ್ದಾರೆ. ಈ ಕಾಯ್ದೆಯ ನಿಯಮಾವಳಿಗಳು ಅನೌಪಚಾರಿಕ ವಲಯದಲ್ಲಿ ಕೆಲಸ ಮಾಡುವ ಕಾರ್ಮಿಕರು, ಕೂಲಿ ಕಾರ್ಮಿಕರು, ಸ್ವ-ಉದ್ಯೋಗಿಗಳು, ವಲಸೆ ಕಾರ್ಮಿಕರು ಮತ್ತು ಸ್ವಿಗ್ಗಿ, ಜೊಮಾಟೋ, ಓಲಾ, ಊಬರ್ ಸೇರಿದಂತೆ ಎಲ್ಲಾ ಪ್ಲಾಟ್ ಫಾರ್ಮ್ ಗಳಲ್ಲಿ ದುಡಿಯುವ ಕಾರ್ಮಿಕರ ಹಕ್ಕುಗಳನ್ನು ಸಹ ಎತ್ತಿಹಿಡಿಯಬೇಕು.
4. ಸೇವಾಭದ್ರತೆಯನ್ನು ಒದಗಿಸುವ ಉದ್ಯೋಗಗಳ ಕಟ್ಟಕಡೆಯ ಪಳಿಯುಳಿಕೆಗಳಾಗಿರುವ ಸಾರ್ವಜನಿಕ ವಲಯದ ಉದ್ಯಮಗಳನ್ನು ಖಾಸಗೀಕರಣಗೊಳಿಸುವ ಎಲ್ಲಾ ಪ್ರಸ್ತಾಪಗಳನ್ನು ಸರ್ಕಾರ ಈ ತಕ್ಷಣವೇ ಹಿಂಪಡೆಯಬೇಕು.
5. ಈ ದೇಶದ ಗ್ರಾಮೀಣ ಜನರಿಗೆ ಅತ್ಯಂತ ಹೆಚ್ಚು ಉದ್ಯೋಗಗಳನ್ನು ಒದಗಿಸುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆ (MGNREGA)ಯ ಅನುಷ್ಠಾನಕ್ಕೆ ನೀಡುವ ಅನುದಾನವನ್ನು ಹೇಗೆ ಸರ್ಕಾರವು ಕಡಿತಗೊಳಿಸಿದೆ ಎಂಬುದನ್ನು ಈ ದೇಶದ ಯುವಕರು ಗಮನಿಸಿದ್ದಾರೆ. ಈ ಯೋಜನೆಯ ಸಮರ್ಪಕ ಜಾರಿಗಾಗಿ 2.5 ಲಕ್ಷ ಕೋಟಿ ಬೇಕಾಗುತ್ತದೆ ಎಂದು ಅಂದಾಜಿಸಲಾಗಿದ್ದು, ಈ ಯೋಜನೆಗೆ ಅಗತ್ಯ ಅನುದಾನವನ್ನು ಸರ್ಕಾರ ಒದಗಿಸಬೇಕೆಂದು ಒತ್ತಾಯಿಸುತ್ತೇವೆ. ಅಲ್ಲದೇ, MGNREGA ರೀತಿಯಲ್ಲಿಯೇ ನಗರ ಪ್ರದೇಶಗಳಲ್ಲಿ ನೆಲೆಸಿರುವ ಬಡವರಿಗೆ ಉದ್ಯೋಗ ಯೋಜನೆಯೊಂದನ್ನು ರೂಪಿಸಬೇಕು. ಈ ಯೋಜನೆಯ ಅನುಷ್ಠಾನಕ್ಕೆ ಅಗತ್ಯ ಬೀಳುವ ರೂ. 3.2 ಲಕ್ಷ ಕೋಟಿಯಷ್ಟು ಅನುದಾನವನ್ನೂ ಸರ್ಕಾರ ನೀಡಬೇಕು.
6. ಸಾಮಾಜಿಕ ವಲಯಕ್ಕೆ ಸಂಬಂಧಿಸಿದ ಯೋಜನೆಗಳ ಜಾರಿಗೆ ಮೀಸಲಿಡುವ ಮೊತ್ತವನ್ನು ಬಜೆಟ್ನ ಕನಿಷ್ಠ ಶೇ. 30% ಕ್ಕೆ ಏರಿಸಬೇಕು. ಇದು ಸರ್ಕಾರಿ ಉದ್ಯೋಗಗಳನ್ನು ಸೃಷ್ಟಿಸಲು ಅನುವು ಮಾಡಿಕೊಡುತ್ತದೆ.
7. ಅತೀಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿಗೆ ಆರ್ಥಿಕ ಪ್ರೋತ್ಸಾಹವನ್ನು ಒದಗಿಸುವುದೂ ಸೇರಿದಂತೆ ಕಡಿಮೆ ಬಡ್ಡಿದರದಲ್ಲಿ ಸುಲಭ ಸಾಲಗಳನ್ನು ಒದಗಿಸಬೇಕು. ಅಲ್ಲದೇ, ಹಲವು ವಸ್ತುಗಳ ಉತ್ಪಾದನೆಯನ್ನು ಸಣ್ಣ ಉದ್ದಿಮೆಗಳಿಗಾಗಿಯೇ ಮೀಸಲಿಟ್ಟು ಅವುಗಳ ಆಮದನ್ನು ನಿಷೇಧಿಸಬೇಕು.
8. ಕೃಷಿಯು ಉದ್ಯೋಗವನ್ನು ಒದಗಿಸದ ತನಕ, ನಿರುದ್ಯೋಗವನ್ನು ತಡೆಗಟ್ಟಲು ಸಾಧ್ಯವಾಗುವುದಿಲ್ಲ. ನಿರುದ್ಯೋಗವನ್ನು ಕಡಿಮೆ ಮಾಡಬೇಕೆಂದರೆ, ಕೃಷಿಯಿಂದ ಜನರು ತಮ್ಮ ಜೀವನವನ್ನು ಸಾಗಿಸುವಷ್ಟು ಆದಾಯವನ್ನು ಗಳಿಸುವ ಪರಿಸ್ಥಿತಿ ನಿರ್ಮಾಣವಾಗಬೇಕಿದೆ. ಈ ನಿಟ್ಟಿನಲ್ಲಿ, ಸರ್ಕಾರವು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅದರಲ್ಲಿಯೂ ವಿಶೇಷವಾಗಿ, ವಿವಿಧ ಕೃಷಿ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆಯನ್ನು ಒದಗಿಸಬೇಕೆಂದು ರೈತ ಚಳುವಳಿಗಳು ದಶಕಗಳಿಂದಲೂ ಸರ್ಕಾರಗಳನ್ನು ಒತ್ತಾಯಿಸುತ್ತಾ ಬಂದಿವೆ. ಈ ಬೇಡಿಕೆಯನ್ನು ಸರ್ಕಾರ ಈ ಕೂಡಲೇ ಮಾನ್ಯ ಮಾಡಿ, ಅದನ್ನು ಜಾರಿಗೆ ತರಬೇಕು.

# STUDENT YOUTH MANIFESTO

Lok Sabha Election 2024

Youths for Welfare State

## CONSTITUTIONAL VISION OF PROVIDING FREE EDUCATION V/S GOVERNMENT THAT EDUCATION

The only prescription of any time limit in the Constitution of India is regarding education! Article 45 states that “within 10 years from the promulgation of the Constitution, efforts shall be made to provide free and compulsory education to all children in the country”. But what have the governments that came to power swearing on the constitution done so far? They have only extorted children and pushed parents to debts in the garb of fees and donations. While they provide the best of education to the children of the rich while providing education of bad quality to children of the poor. The government itself is actively creating a divide between the children of the rich and the poor based on their economic statuses. This is a gross injustice being meted out to the constitution and unity of the country. As a result, children are forced to spend crores of rupees on their education. And by doing so, the government itself has made way for corruption by pushing the students to the inevitable situation of having to work only to earn back what they have spent on education.

## WHAT HAPPENS TO STUDENTS WHO DEBT TRAPS WHO GRADUATE DEBT AND BREAK THROUGH THE MONEY MAZE?

According to the reports of NSSO, the government’s statistical arm, unemployment has peaked as it hit a 45-year historic high. On the other end, for a job call that enlisted only 62 openings, over 10,000 applications were received. In the state of Uttar Pradesh, for 60,000 vacancies in the policies department, over 50 lakh young people had applied. These instances are pointing to the horrors of unemployment. The government today administers only a little over 2% of the jobs. In such a scenario, instead of creating jobs, the government has stooped down to levels of claiming that India isn’t bothered by the issue of unemployment!

## JOBS WITHOUT SECURITY - A COUNTRY WITHOUT FUTURE!

Of all the jobs available, more than 96% are available in the private sector which offer no job security. Alongside, the governments are hiring employees on contract basis in their own institutions and pushing youth to sweat out and labour, without providing them any job security. Not just that, by recruiting young soldiers on contract basis even in Army, argubaly the most sensitive realm of defense services, that too for a period of just 4 months, it has introduced a system found nowhere else in the world! After their contract ends, the young soldiers too are pushed onto the streets who are to fend for themselves. When young people who served the country’s

army hit the streets demanding job security, they were also charged with batons!

But what does the Constitution say?: According to Article 16 of the Constitution, "No citizen shall, on grounds only of religion, race, caste, sex, descent, place of birth, residence or any of them, be ineligible for, or discriminated against in respect of, any employment of office under the State"  Isn't then, the contract system a clear violation of this value of the Constitution?

What are we demanding during elections? Beyond the directives and Code of Conduct prescribed by the Election Commission, political parties are spreading hatred in the name of caste and religion. Money, alcohol and personal hatred is driving the politics here. We insist and urge the parties to leave behind these issues that do not contribute to the  lives of people in any which way and to compete positively on the real issue of provisioning of free and compulsory quality education, creating decent and secure employment opportunities for youth according to their qualifications.

On behalf of all the students and parents of the state, we put forth our demands before the country through this student manifesto:

## EDUCATION

1. Repeal NEP 2020 and ensure that the implementation of all the various components of NEP including NCF – 2023, changes ushered in regarding courses on offer is stopped while ensuring that the students' interests are not compromised.
2. Both Union and State governments must take necessary measures to ensure that SC, ST, OBC, Persons with Disability and Transgender community reservations are applicable in all higher educational institutions including private unaided institutions. Reservations must be provided in both respects - student admissions and staff (teaching and non-teaching) recruitment and promotions.
3. Governments must ensure effective implementation of reservations in favour of SC, ST, OBC, Transgender community, and Persons with Disabilities.
4. The subject of education must be shifted back to the state list through Constitutional Amendment.
5. Stop corporatisation, commercialisation, communalisation, centralisation, social discrimination and bureaucratisation in education.
6. Stop contractualization of teaching and non-teaching posts and their deployment for non-academic tasks and propagandas.
7. Ensure adequate and effective implementation of the Right to Education Act, which enforces Article 21 of the Fundamental Rights in the Constitution by emphasizing the education of all children, including children with disabilities, and to provide all basic facilities immediately.
8. Kothari Commission had recommended that the government must spend at least 6% of GDP on education. The same has been reiterated by many commissions time and again. However, government's spending on education over the decades has stagnated at around 2.9% to 3.4% of the GDP. We urge the government to shed its unwillingness to fund education.
9. The right of people to free and compulsory education that presently serves children between the ages 6-14 thereby leaving out higher education and Early Childhood Care and Education (ECCE) from its purview. This right of children to education must also include the much needed higher education and early childhood care and education levels of education.

In addition to these demands, enlisted below are specific demands pertaining to primary and higher education:

## PRIMARY EDUCATION

1. Many attempts are underway to close down, merge and/or 'rationalize' government schools and anganwadis. This is not just an attack on the public school system, but it also pushes students, especially from marginalized communities out of the education system. Hence, any such attempts must be immediately halted. On the contrary, we urge the governments to adopt necessary steps to strengthen public education system.
2. Provide textbooks, note books, uniforms, bicycle, scholarship, etc. to all students in a timely manner. Stop using Aadhaar Based Payments system and Direct Benefit Transfer for incentive based schemes in government schools.
3. Establish a fully state-funded Common Education System for equitable, quality, free, just and secular education for all from KG to PG including Common School System based on the concept of neighborhood schools. This can be undertaken in a phase-by-phase manner wherein equal school education of equal quality as recommended in Empowerment Report 2017 can be put into practice. Public Foundational Neighbourhood Primary School at village level from Pre- Primary to Class IV and Public Neighbourhood Day/ Residential School at Panchayat/ Ward level from Pre- Primary to Class 12 in a phased manner.
4. Ensure eradication of malnutrition by committing to implement the breakfast scheme in addition to the mid-day meal schemes (This breakfast scheme must be accompanied with provisioning of Milk and other intakes of nutritional value for children). Additionally, eggs must also be provided everyday to students up to class 10 right from Anganwadi.
5. Provide effective training to democratically formed and constitutionally functioning School Development and Monitoring Committees in government schools
6. Stop any further stratification of schools under different names like Model schools, Schools of Eminence, PMSHRI Schools etc.
7. To safeguard the interests of children and parents in private schools (aided and un-aided), to make private schools accountable to the masses, formulated and enforce strict comprehensive laws including fee regulation, minimum standards and norms for quality education and an institutional structure that complements parental involvement, as is already in place in most states.
8. Provide in every district adequate number of hostels for Dalits, Adivasis, OBCs and Minorities, with proper facilities and services.

## HIGHER EDUCATION

1. Withdraw FYUP, CUET, NEET and JEE and other similar centralised admission tests and respect the rights of State governments in a federal structure.
2. Stop online education; open more regular educational institutions; and ensure quality reading materials and teaching arrangements for students enrolled in distance education.
3. Ban foreign universities from establishing campuses in India.
4. The governments must not interfere with and/or curb the functioning of universities. The autonomy of university spaces must be respected and they be governed in accordance with their own rules and regulation
5. Any attempts to distort history and introduce obscurantist courses must immediately be halted.
6. Measures must be undertaken to restore and expand social justice in education for SC, ST, OBC, PWBD (Person with Benchmark Disability) including establishment of special coaching facilities, prompt disbursement of scholarships/ fellowships and reservation; and fill up the existing backlog in appointments.
7. Enact Rohit Act to eradicate institutional discrimination. Alongside, Gender Sensitization Committee Against Sexual Harassments (GS-CASH) committees/cells with quasi-judicial powers must be established to address sexual  in higher educational institutions.
8. UGC has mandated every university to establish separate cells to address problems faced by students and faculties belonging to SC/ ST and Minority communities. These cells must be established and administered as per UGC Guidelines - 1998.
9. All university and college spaces must be made accessible to students with disabilities. Also, reading material for students with disabilities.
10. Restore campus democracy, academic autonomy, and freedom of expression. Ensure that students' unions are recognised by all universities and colleges. Democratic processes and elections must guide the functioning of students' unions in every college and university.
11. Stop immediately, any political appointments to education institutions.
12. Initiate all kinds of measures to strengthen and expand public universities and colleges and stop the mushrooming of private autonomous universities and colleges.
13. To select/ appoint as ministers of all education related departments only those eligible persons who have demonstrated their interests in the field of education, understand the importance of the education system and are responsive to the demands of students' and teachers'

community.

14. Establish all future public higher education institutions in socio-economically and educationally backward districts.
15. Establish at least one government medical college and hospital in each district of the country.
16. To safeguard the interests of children and parents in private colleges and universities (aided and un-aided), to make private colleges and universities accountable to the masses, formulate and enforce strict comprehensive laws that include aspects of fee regulation, minimum standards and norms for quality education, attendance rules which account for mental health of students and an institutional structure that complements parental involvement.

## EMPLOYMENT:

Previously, the Bharatiya Janata Party (BJP) rose to power on the plank of addressing unemployment. The present Prime Minister Narendra Modi had promised that his government would create 2 Crore jobs. The bankruptcy of the BJP government came to light time and again over the last 10 years of its rule as unemployment rates of the country reached a historic high, leaving the youth clueless. In such a situation, the youth of this country are staring at the bleak futures ahead. Let alone creating jobs, various reports have indicated that India had from 'Jobless growth to Job-Loss growth' between 2012 and 2018! The unemployment scenario only aggravated in the post-Covid period! This could have devastating effects on not just the students and youth of this country but the nation's economy itself. This trend has to be reversed immediately and to this end, we demand that:

1. All vacant posts in the government machinery must be filled up immediately. It infuriates every citizen of this country that despite India suffering from a woeful undersupply of public sector workers, around 9.4 Lakh jobs in the government departments and quasi-governmental institutions lie vacant. Recruitment to these jobs will not just provide employment to youth, but also strengthen the government machinery which suffers woeful undersupply of public sector workers.
2. Scrap the new labour codes and restore sectoral laws including the two Building & Other Construction Workers (BOCW), Plantation Labour Act, Motor Transport Workers Act and the Beedi and Salt Workers' Welfare Cesses and Welfare Schemes
3. In addition to the same, the youth of this country demand the formulation of a comprehensive Law that upholds the rights of informal workers extending Core Labour Standards to all segments of workers including the wage labourers, the self-employed, the migrant workers and platform workers.
4. The government must immediately withdraw all proposals to privatize public sector enterprises which are the last vestiges of jobs with security.
5. The youth of this country have taken note of how the government has cut down the budgetary allocation to arguably the biggest job provider for the rural population of this country,the Mahatma Gandhi National Rural Employment Guarantee Act (MGNREGA). We urge the government to allocate necessary funds for the scheme, estimated to be 2.5 Lakh crore, and ensure its effective implementation. In addition to the same, a job scheme for Urban Poor, similar to that of MGNREGA must be instituted. The allocations for this scheme should be in-line with the estimate of costs - Rs. 3.2 Lakh crore.
6. Increase social sector spending to at least 30% of the budget

enabling the creation of more government jobs.

7. Provide financial incentives for development of Micro, Small and Medium Enterprises including providing easy loans at low interest rates and also reserve production of several items for the small-scale sector and ban imports of these items.
8. Until agriculture does not provide for subsistence employment, the pressures of unemployment shall remain high. In order to reduce unemployment, it becomes important to ensure agriculture is rewarding. We demand that the government takes necessary steps in this regard, especially the implementation of the long standing demands of the Farmers' movement to provide MSP on various farm products.




The State shall endeavour to provide, within a period of ten years from the commencement of this Constitution, for free and compulsory education for all children until they complete the age of fourteen years.
**- Article 45 of Indian Constitution**

There shall be equality of opportunity for all citizens in matters relating to employment or appointment to any office under the State,
**- Article 16 of Indian Constitution**

ಸರ್ಕಾರವು ಈ ಸಂವಿಧಾನ ಜಾರಿಯಾದ ಹತ್ತು ವರ್ಷಗಳ ಅವಧಿಯೊಳಗಾಗಿ, 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಲು ಪ್ರಯತ್ನಿಸಬೇಕು.
**– ಅನುಚ್ಛೇದ 45, ಭಾರತದ ಸಂವಿಧಾನ.**

ಸರ್ಕಾರದ ಅಡಿಯಲ್ಲಿ ಬರುವ ಯಾವುದೇ ಸಾರ್ವಜನಿಕ ಉದ್ಯೋಗ ಅಥವಾ ನೇಮಕಾತಿಗೆ ಸಂಬಂಧಿಸಿದ ವಿಷಯಗಳಲ್ಲಿ ಎಲ್ಲಾ ನಾಗರಿಕರಿಗೆ ಸಮಾನ ಅವಕಾಶ ಒದಗಿಸಬೇಕು.
**– ಅನುಚ್ಛೇದ 16, ಭಾರತದ ಸಂವಿಧಾನ.**

**FEDERATION OF STUDENT ORGANIZATIONS,KARNATAKA**